

# ಜಾಣ್ಮೆ ತುಂಬಿದ ಕುಡಿಕೆ

ಹಿಂದೊಮ್ಮೆ ಮೊಗಲ್ ಸಾಮ್ರಾಜ್ಯದ ಚಕ್ರವರ್ತಿ ಅಕ್ಬರನಿಗೆ ತನ್ನ ಅತ್ಯಂತ ನಿಕಟವರ್ತಿ ಬೀರಬಲ್ಲನ ಮೇಲೆ ಕ್ಷುಲ್ಲಕ ಕಾರಣಕ್ಕೆ ಅಸಾಧ್ಯವಾದ ಕೋಪ ಬಂದು ರೇಗಾಡಿದ. ಅದರಿಂದ ಬೇಸರಗೊಂಡ ಬೀರಬಲ್ಲ ಅರಮನೆಯನ್ನು ತೊರೆದು ದೂರದ ಗ್ರಾಮವೊಂದರಲ್ಲಿ ಮಾರುವೇಷದಲ್ಲಿ ನೆಲೆಸಿದ. ಕೆಲಸಮಯದ ನಂತರ ಅಕ್ಬರನಿಗೆ ಕೋಪ ಶಮನವಾಗಿ ಬೀರಬಲ್ಲನ ನೆನಪು ಕಾಡತೊಡಗಿತು. ತನ್ನ ಪರಮಾಪ್ತನನ್ನು ಹುಡುಕಿ ತರಲು ಭಟರನ್ನು ಎಲ್ಲೆಡೆ ಕಳುಹಿಸಿದರೂ ಆತನ ಇರುವು ಗೊತ್ತಾಗಲಿಲ್ಲ. ಕೊನೆಗೆ ಬೀರಬಲ್ಲನನ್ನು ಹುಡುಕಲು ರಾಜ ತಾನೇ ಒಂದು ತಂತ್ರವನ್ನು ಹೂಡಿದ.

ಮಾರನೆಯ ದಿನ ಅಕ್ಬರ್ ಡಂಗುರವೊಂದನ್ನು ಹೊಡೆಸಿದ. ಅದೇನೆಂದರೆ ಎಲ್ಲಾ ಗ್ರಾಮದಿಂದಲೂ ಒಂದೊಂದು ಜಾಣ್ಮೆ ತುಂಬಿದ ಕುಡಿಕೆಯನ್ನು ಒಂದು ತಿಂಗಳೊಳಗೆ ಅರಮನೆಗೆ ತಲುಪಿಸಬೇಕು. ಯಾರು ಜಾಣ್ಮೆ ತುಂಬಿದ ಕುಡಿಕೆಯನ್ನು ಕಳುಹಿಸಲು ವಿಫಲರಾಗುತ್ತಾರೋ ಅವರು ಭಂಡಾರಕ್ಕೆ ಒಂದು ಕುಡಿಕೆ ಹೊನ್ನನ್ನು ಅರ್ಪಿಸಬೇಕು, ಎಂದಾಗಿತ್ತು. ಆ ಡಂಗುರವನ್ನು ಕೇಳಿ ಊರಜನರಿಗೆ ದಿಗ್ಭ್ರಮೆಯಾಯಿತು. 'ಜಾಣ್ಮೆ ತುಂಬಿದ ಕುಡಿಕೆಯೇ? ಜಾಣ್ಮೆಯೇನು ಕುಡಿಕೆಯೊಳಗೆ ತುಂಬುವಂತಹ ವಸ್ತುವೇ? ಚಕ್ರವರ್ತಿಯೇಕೆ ಇಂತಹ ಅಸಂಭವನೀಯ ಬೇಡಿಕೆಯನ್ನಿಟ್ಟಿದ್ದಾರೆ' ಎಂದು ತಲೆ ಕೆಡಿಸಿಕೊಂಡು ಬೇರೆ ದಾರಿಗಾಣದೆ ಕುಡಿಕೆಯಷ್ಟು ಹೊನ್ನನ್ನು ರಾಜಭಂಡಾರಕ್ಕೆ ನೀಡುವುದೇ ಸೂಕ್ತವೆಂದು ತೀರ್ಮಾನಕ್ಕೆ ಬಂದರು.

ಆದರೆ ಬೀರಬಲ್ಲನಿದ್ದ ಗ್ರಾಮವು ಒಡತನದಿಂದ ತುಂಬಿತ್ತು. ಗ್ರಾಮದವರೆಲ್ಲರೂ ಒಂದು ಸಭೆಯನ್ನು ಕರೆದು ರಾಜನ ಬೇಡಿಕೆಯನ್ನು ಹೇಗೆ ಮನ್ನಿಸಬೇಕೆಂದು ಯೋಚನಾಮಗ್ನರಾದರು. ಆಗ ಅಲ್ಲಿಗೆ ಬಂದ ಬೀರಬಲ್ಲ ಗ್ರಾಮಸ್ಥರಿಗೆ ತಾನು ರಾಜನ ಅಪೇಕ್ಷೆಯಂತೆ ಜಾಣ್ಮೆ ತುಂಬಿದ ಕುಡಿಕೆಯನ್ನು ಸದ್ದದಲ್ಲೇ ಸಿದ್ಧಪಡಿಸುವುದಾಗಿ ಅಭಯವನ್ನಿತ್ತ. ಅನ್ಯಮಾರ್ಗವಿಲ್ಲದೆ ಆ ಅಪರಿಚಿತನ ಧೃಢಮಾತನ್ನು ಆಲಿಸಿ ಜಾಣ್ಮೆ ತುಂಬಿದ ಕುಡಿಕೆಯನ್ನು ಮಾಡುವ ಜವಾಬ್ದಾರಿಯನ್ನು ಅವನಿಗೆ ಒಪ್ಪಿಸಿದರು.

ಅಕ್ಬರನ ಮನದಿಂಗಿತವನ್ನರಿತಿದ್ದ ಬೀರಬಲ್ಲ ಯೋಚಿಸಿ ಒಂದು ತೀರ್ಮಾನಕ್ಕೆ ಬಂದ. ಆತ ಅಲ್ಲಿರುವ ಹಿತ್ತಿಲಿಗೆ ಹೋಗಿ ಅಲ್ಲಿ ಬೆಳೆಸಿದ್ದ ಕುಂಬಳಕಾಯಿ ಬಳ್ಳಿಯಲ್ಲಿ ಆಗತಾನೆ ಮೂಡಿದ್ದ ಎಳೆಯ ಕುಂಬಳಕಾಯಿಯನ್ನು ಮಣ್ಣಿನ ಕುಡಿಕೆಯೊಂದರೊಳಗೆ ಬಳ್ಳಿ ಸಮೇತ ಸೆರೆಹಿಡಿದ. ನಂತರ ದಿನವೂ ಹೋಗಿ ಆ ಕುಡಿಕೆಯೊಳಗೆ ಕುಂಬಳಕಾಯಿ ಬಲಿತು ದೊಡ್ಡದಾಗುವುದನ್ನೇ ಪರಿಶೀಲಿಸಿ ಸಮಧಾನಪಟ್ಟುಕೊಂಡ. ಹಲವು ದಿನಗಳಲ್ಲಿ ಆ ಕುಂಬಳಕಾಯಿಯು ಆ ಕುಡಿಕೆಯೊಳಗಿನ ಗಾತ್ರದಷ್ಟು ಪೂರ್ತಿಯಾಗಿ ಆವರಿಸಿಕೊಂಡು ಬಲಿತಾಗ ಅದನ್ನು ಬಳ್ಳಿಯಿಂದ ಕತ್ತರಿಸಿ ತೆಗೆದ. ಆ ಕುಡಿಕೆಯೊಳಗೆ ಅಲ್ಲಾಡದಂತೆ ಕುಂಬಳಕಾಯಿಯು ಭದ್ರವಾಗಿ ತುಂಬಿತ್ತು.

ಆ ಕುಡಿಕೆಯ ಕುಂಬಳಕಾಯಿಯನ್ನು ಗ್ರಾಮಸ್ಥರ ಕೈಗಿಡುತ್ತಾ 'ನೀವು ಇದನ್ನು ಜಾಗ್ರತೆಯಿಂದ ಕೊಂಡುಹೋಗಿ ಅಕ್ಬರ್ ಚಕ್ರವರ್ತಿಗಿತ್ತು ಈ ಕುಡಿಕೆ ಒಡೆಯದಂತೆ ಇದರೊಳಗಿರುವ ಕುಂಬಳಕಾಯಿಯನ್ನು ಇಡಿಯಾಗಿ ಹೊರಗೆ ತೆಗೆಯಬೇಕು. ಹಾಗೆ ತೆಗೆಯಲಾಗದಿದ್ದರೆ ಇದನ್ನು ಜಾಣ್ಮೆಯ ಕುಡಿಕೆಯೆಂದು ಸನ್ನಿಧಾನವು ಒಪ್ಪಬೇಕು ಎಂದು ನಿವೇದನೆ ಮಾಡಿ' ಎಂದ. ಬೀರಬಲ್ಲನ ಮಾತಿನಂತೆ ಗ್ರಾಮದ ಮುಖ್ಯಸ್ಥರು ಆ ಕುಡಿಕೆ ತುಂಬಿದ ಕುಂಬಳಕಾಯಿಯನ್ನು ಚಕ್ರವರ್ತಿ ಅಕ್ಬರನಿಗೆ ಅರ್ಪಿಸಿ ಹಾಗೆಯೇ ನುಡಿದರು. ಅದನ್ನು ನೋಡಿ ಹಸನ್ಮುಖಿಯಾದ ಅಕ್ಬರ್ ನಿಜವಾಗಿಯೂ ಇದು ಜಾಣ್ಮೆಯ ಕುಡಿಕೆ ಎಂದು ಒಪ್ಪಿಕೊಂಡು ಅದನ್ನು ಮಾಡಿದವರು ಯಾರು ಎಂದು ಪ್ರಶ್ನಿಸಿದಾಗ ಗ್ರಾಮಸ್ಥರು ಅದು ತಮ್ಮ ಗ್ರಾಮದಲ್ಲಿ ವಾಸ್ತವ್ಯವಿರುವ ಅಪರಿಚಿತ ಚತುರನ ಕಾರ್ಯವೆಂದರು.

ಆಗ ಅಕ್ಬರ ಇಂತಹ ಜಾಣ್ಮೆಯ ಕೆಲಸವನ್ನು ಮಾಡಿದವನು ಬೀರಬಲ್ಲನೇ ಇರಬೇಕೆಂದು ಯೋಚಿಸಿ ತಕ್ಷಣ ಕುದುರೆಯೇರಿ ಆ ಗ್ರಾಮಕ್ಕೆ ದೌಡಾಯಿಸಿದ. ಅಲ್ಲಿ ತನ್ನ ನಿರೀಕ್ಷೆಯಲ್ಲಿದ್ದ ಬೀರಬಲ್ಲನನ್ನು ಕಂಡು ಬಿಗಿದಪ್ಪಿ ಸಂತೈಸಿ ಅವನನ್ನು ಅಕ್ಬರ ಅರಮನೆಗೆ ರಾಜಮರ್ಯಾದೆ ಸಮೇತ ಕರೆದುಕೊಂಡು ಹೋದ.

**-ರಮೇಶ್ ಶೆಟ್ಟಿಗಾರ್**